574 ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ: 01.07.08 ರಿಂದ ಇಲ್ಲಿಯವರೆಗೆ ವಿವಿಧ ಇಲಾಖೆಯ, ವಿವಿಧ ಹುದ್ದೆಯ ಅಧಿಕಾರಿಗಳ ಮೇಲೆ ಲೋಕಾಯುಕ್ತರು ದಾಳಿ ನಡೆಸಿ ಮೊಕದ್ದಮ್ಮೆ ದಾಖಲಿಸಿದ ಪ್ರಕರಣಗಳೆಷ್ಟು ಹಾಗೂ ಲಂಚ ಸ್ವೀಕರಿಸುವಾಗ ಲೋಕಾಯುಕ್ತರ ಬಲೆಗೆ ಬಿದ್ದ ಪ್ರಕರಣಗಳೆಷ್ಟು; (ಅಧಿಕಾರಿಗಳ/ನೌಕರರ ಹೆಸರು, ಪದನಾಮ ಹಾಗೂ ಜಾತಿಯ ವಿವರಗಳ ಬಗ್ಗೆ ಮಾಹಿತಿ ಒದಗಿಸುವುದು).

ಆ) ಈ ಪ್ರಕರಣಗಳಲ್ಲಿ ಅಮಾನತ್ತುಗೊಂಡ ಹಾಗೂ ಅಮಾನತ್ತು ಗೊಳ್ಳದ ಅಧಿಕಾರಿಗಳು/ನೌಕರರ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಇ) ಕೆಲವೆಡೆ ಅಮಾನತ್ತುಗೊಳಿಸಿದ್ದು ಮತ್ತು ಕೆಲವೆಡೆ ಅಮಾನತ್ತು ಗೊಳಿಸದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ದಿ: 01.0708 ರಿಂದ ಇಲ್ಲಿಯವರೆಗೆ ಲೋಕಾಯುಕ್ತ ದಾಳಿಗೆ ಒಳಗಾದ ಅಧಿಕಾರಿಗಳು

1. ಶ್ರೀ ಡಿ.ಬಿ.ನಾಯಕ್. ಕೆಎಎಸ್ (ಸೂ.ಟೈಂ.ಸ್ಕೇಲ್)

ಜಾತಿ – ಪರಿಶಿಷ್ಟ ಜಾತಿ

2. ಶ್ರೀ ವೈ.ಎಂ.ರಾಮಚಂದ್ರಮೂರ್ತಿ, ಕೆಎಎಸ್ (ಹಿ.ಶ್ರೇ)

ಜಾತಿ – ಒಕ್ಕಲಿಗ

ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳು

1. ಶ್ರೀ ಎ.ಮರಿಗೌಡ, ಕೆಎಎಸ್ (ಕಿ.ಶ್ರೇ)

ಜಾತಿ – ಕುರುಬ

ಆ) ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಅಮಾನತ್ತುಗೊಂಡ ಅಧಿಕಾರಿಗಳು

1. ಶ್ರೀ ಡಿ.ಬಿ.ನಾಯಕ್, ಕೆಎಎಸ್ (ಸೂ.ಟೈಂ.ಸ್ಕೇಲ್) ಇವರನ್ನು ದಿ: 28.10.08ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ತದನಂತರ ದಿ: 31.08.09ರ ಆದೇಶದಲ್ಲಿ ಸೇವೆಗೆ ಪುನರ್ ನೇಮಕ ಮಾಡಲಾಗಿದೆ.

ಲಂಚ ಪ್ರಕರಣದಲ್ಲಿ ಸಿಲುಕಿ ಅಮಾನತ್ತುಗೊಂಡ ಅಧಿಕಾರಿಗಳು

1. ಶ್ರೀ ಎ.ಮರಿಗೌಡ, ಕೆಎಎಸ್ (ಕಿ.ಶ್ರೇ.) ಇವರನ್ನು ದಿ: 24.07.09ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದ್ದು, ಇನ್ನೂ ಅಮಾನತ್ತಿನಲ್ಲಿಯೇ ಮುಂದುವರಿದಿರುತ್ತಾರೆ.

ಲೋಕಾಯುಕ್ತ ದಾಳಿಗೆ ಒಳಗಾಗಿ ಅಮಾನತ್ತುಗೊಳಿಸದೆ ಇರುವ ಅಧಿಕಾರಿಗಳು

1. ಶ್ರೀ ವೈ ಎಂ.ರಾಮಚಂದ್ರಮೂರ್ತಿ, ಕೆಎಎಸ್, (ಕಿ.ಶ್ರೇ) ಅಧಿಕಾರಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲು ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದು. ಪ್ರಸ್ತಾವನೆಯ ಪರಿಶೀಲನೆಯಲ್ಲಿರುತ್ತದೆ.

ಮುಜರಾಯಿ ದೇವಸ್ಥಾನಗಳು

417 ಶ್ರೀ ಪುಟ್ಟರಾಜು ಸಿ.ಎಸ್ : ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳೆಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ತಸ್ತೀಕ್ ರೂಪದಲ್ಲಿ ಸಂಬಳವನ್ನು ಪಡೆಯುತ್ತಿರುವ ಅರ್ಚಕರ ಸಂಖ್ಯೆ ಎಷ್ಟು; ಪ್ರತಿ ಅರ್ಚಕರಿಗೆ ಪ್ರತಿ ತಿಂಗಳಿಗೆ ನೀಡುತ್ತಿರುವ ತಸ್ತೀಕ್ ಎಷ್ಟು; ಹಾಗೂ ಸರ್ಕಾರ ಪ್ರತಿ ವರ್ಷ ಭರಿಸುವ ಹಣವೆಷ್ಟು;

ಇ) ದೇವಸ್ಥಾನದ ಆದಾಯದ ಮೂಲದಿಂದ ಸಂಬಳದ ರೂಪದಲ್ಲಿ ಪ್ರತಿ ತಿಂಗಳು ಹಣ ಪಡೆಯುತ್ತಿರುವ ಅರ್ಚಕರ ಸಂಖ್ಯೆ ಎಷ್ಟು; ಇವರು ಪ್ರತಿ ವರ್ಷ ಪಡೆಯುತ್ತಿರುವ ವೇತನದ ಮೊತ್ತವೆಷ್ಟು;

ಈ) ತಸ್ತೀಕ್ ರೂಪದಲ್ಲಿ ಹಾಗೂ ಆದಾಯದ ಮೂಲದ ದೇವಸ್ಥಾನದಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಚಕರ ಸಂಭಾವನೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ವಿ.ಎಸ್. ಆಚಾರ್ಯ (ಗೃಹ ಮತ್ತು ಮುಜರಾಯಿ ಸಚಿವರು) :

ಅ) ಒಟ್ಟು 34.210.

ಜಿಲ್ಲಾವಾರು ವಿವರಗಳನ್ನು ಅನುಬಂಧ (1) ರಲ್ಲಿ ನೀಡಿದೆ.

ಆ) ಒಟ್ಟು 31275.